ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉನಿ : ಸುಮಪ : 2018-19 : ದಿನಾಂಕ : 06-10-2018

## ಪತ್ರಿಕಾ ಆಮಂತ್ರಣ

1. ವಿ.ಪಿ. ದೀನದಯಾಳು ನಾಯ್ಡು ಜನ್ಮಶತಮಾನೋತ್ಸವ ಸಮಾರೋಪ ಸಮಾರಂಭ:

ಮುಖ್ಯ ಅತಿಥಿಗಳು:
ಎಂ. ವೆಂಕಯ್ಯ ನಾಯ್ಡು, ಭಾರತದ ಘನತೆವೆತ್ತ ಉಪ ರಾಷ್ಟ್ರಪತಿಗಳು

ಗೌರವಾನ್ವಿತ ಅತಿಥಿಗಳು:
ವಾಜುಬಾಯಿ ವಾಲಾ, ರಾಜ್ಯಪಾಲರು, ಕರ್ನಾಟಕ

ಹೆಚ್.ಡಿ. ಕುಮಾರಸ್ವಾಮಿ, ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ಡಾ: ಜಿ. ಪರಮೇಶ್ವರ, ಉಪ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ದಿನಾಂಕ: 09-10-2018, ಮಂಗಳವಾರ, ಸಮಯ: ಬೆಳಿಗ್ಗೆ 9-30 ಗಂಟೆಗೆ
ಸ್ಥಳ: ಜ್ಞಾನಜ್ಯೋತಿ ಸಭಾಂಗಣ, ಅರಮನೆ ರಸ್ತೆ, ಬೆಂಗಳೂರು -1

## ಪತ್ರಿಕಾ ಪ್ರಕಟಣೆ

ಸಂಖ್ಯೆ:1102/1202

**ಎಸಿಬಿಯಿಂದ ಭ್ರಷ್ಟಾಚಾರ ಆರೋಪಿತ 02 ಅಧಿಕಾರಿಗಳ ವಿರುದ್ಧ ದಾಳಿ**
**ಇಂದು ಎಸಿಬಿ ಉತ್ತರ ವಲಯ ಮತ್ತು ಇತರೆ ತಂಡಗಳಿಂದ 06 ವಿವಿಧ ಸ್ಥಳಗಳಲ್ಲಿ ಕಾರ್ಯಾಚರಣೆ**

**ಬೆಂಗಳೂರು, ಅಕ್ಟೋಬರ್ 6, 2018 (ಕರ್ನಾಟಕ ವಾರ್ತೆ)**

ದಿನಾಂಕ: 06.10.2018 ರಂದು  ಭ್ರಷ್ಟಾಚಾರ ನಿಗ್ರಹ ದಳ ಉತ್ತರ ವಲಯ ಮತ್ತು ಇತರೆ ತಂಡಗಳಿಂದ  ಬೆಳಗಾವಿ, ಬಾಗಲಕೋಟೆ ಮತ್ತು ವಿಜಯಪುರ ಜಿಲ್ಲೆಯ ವಿವಿಧ ಸ್ಥಳಗಳಲ್ಲಿ **02 ಸರ್ಕಾರಿ ನೌಕರರು** ತಮ್ಮ ಬಲ್ಲ ಮೂಲಗಳಿಗಿಂತ ಅಸಮತೋಲನ ಆಸ್ತಿ-ಪಾಸ್ತಿಗಳನ್ನು ಹೊಂದಿರುವ ಬಗ್ಗೆ ವಿಶ್ವಾಸಾರ್ಹ ಮಾಹಿತಿ ಸಂಗ್ರಹಿಸಿ ಅಕ್ರಮ ಆಸ್ತಿ ಗಳಿಕೆ ಪ್ರಕರಣಗಳನ್ನು ದಾಖಲಿಸಿ ಅವರಿಗೆ ಸಂಬಂಧಿಸಿದ **06 ಸ್ಥಳಗಳ ಮೇಲೆ** ಇಂದು ದಾಳಿ ನಡೆಸಿರುತ್ತದೆ. ಶೋಧನಾ ಕಾರ್ಯವು ಮುಂದುವರೆದಿದ್ದು ಈವರೆಗೆ ಶೋಧನೆ ನಡಸಲಾದ ಜಾಗಗಳ ಮಾಹಿತಿ ಈ ಕೆಳಕಂಡಂತಿರುತ್ತವೆ.

1. **ಶ್ರೀ ಚಂದ್ರೇ ಗೌಡ ಬಿ.ಪಾಟೀಲ್, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಖಾನಾಪುರ ಉಪ ವಿಭಾಗ, ಬೆಳಗಾವಿ ಜಿಲ್ಲೆ**.

ಇವರ ರಾಮತೀರ್ಥನಗರ, ಬೆಳಗಾವಿಯಲ್ಲಿನ ವಾಸದ ಮನೆ, ಇವರ ಸಂಬಂಧಿಕರ ಬೈಲಹೊಂಗಲ, ಬೆಳಗಾವಿ ಜಿಲ್ಲೆಯಲ್ಲಿನ ವಾಸದ ಮನೆ ಹಾಗೂ ಇವರು ಕರ್ತವ್ಯ ನಿರ್ವಹಿಸುತ್ತಿರುವ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಖಾನಾಪುರ ಉಪ ವಿಭಾಗ, ಬೆಳಗಾವಿಯ ಕಛೇರಿ.

2. **ಶ್ರೀ ಚಿದಾನಂದ ಬಿ.ಮಿಂಚಿನಾಳ್, ಎಇಇ, ಗ್ರಾಮೀಣ ಕುಡಿಯುವ ನೀರು ಸರಬರಾಜು ವಿಭಾಗ, ಬಾಗಲಕೋಟೆ ಉಪ ವಿಭಾಗ, ಬಾಗಲಕೋಟೆ ಜಿಲ್ಲೆ**.

ಇವರ ವಿಜಯಪುರ ನಗರದಲ್ಲಿನ ಎರಡು ವಾಸದ ಮನೆ ಮತ್ತು ಇವರು ಕರ್ತವ್ಯ ನಿರ್ವಹಿಸುತ್ತಿರುವ ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ, ಗ್ರಾಮೀಣ ಕುಡಿಯುವ ನೀರು ಸರಬರಾಜು, ಬಾಗಲಕೋಟೆ ಉಪ ವಿಭಾಗ, ಬಾಗಲಕೋಟೆ ಜಿಲ್ಲೆ.

ವಿವಿಧ ಎಸಿಬಿ ತಂಡಗಳಿಂದ ಮೇಲ್ಕಂಡ ಆರೋಪಿತ ಸರ್ಕಾರಿ ನೌಕರರ ವಿರುದ್ಧ ದಾಳಿ ಮುಂದುವರೆದಿದ್ದು, ಸದರಿ ಸರ್ಕಾರಿ ನೌಕರರು ಹೊಂದಿರುವ ಆಸ್ತಿ-ಪಾಸ್ತಿಗಳ ಮೂಲದ ಬಗ್ಗೆ ತನಿಖೆ ಹಾಗೂ ದಾಖಲೆಗಳ ಪರಿಶೀಲನಾ ಕಾರ್ಯ ಹಾಗೂ ಸಂಬಂಧಪಟ್ಟ ಇನ್ನು ಹೆಚ್ಚಿನ ಸ್ಥಳಗಳ ಮಾಹಿತಿ ಸಂಗ್ರಹಣೆ ಮುಂದುವರೆದಿದೆ ಎಂದು ಪ್ರಕಟಣೆ ತಿಳಿಸಿದೆ.

**ಸಂಖ್ಯೆ:1103/1203**

**ಎಸಿಬಿಯಿಂದ ಭ್ರಷ್ಟಾಚಾರ ಆರೋಪಿತ 2 ಅಧಿಕಾರಿಗಳ ವಿರುದ್ಧ ದಾಳಿ**
**ಶೋಧನೆ ವೇಳೆ ಕೋಟ್ಯಾಂತರ ರೂಪಾಯಿ ಮೊತ್ತದ ಚರ ಮತ್ತು ಸ್ಥಿರ ಆಸ್ತಿಗಳ ಪತ್ತೆ**

**ಬೆಂಗಳೂರು, ಅಕ್ಟೋಬರ್ 6, 2018 (ಕರ್ನಾಟಕ ವಾರ್ತೆ)**

ದಿನಾಂಕ: 05.10.2018 ರಂದು ಭ್ರಷ್ಟಾಚಾರ ನಿಗ್ರಹ ದಳ ಬೆಂಗಳೂರು ನಗರ ವಿಭಾಗದ ಮತ್ತು ಇತರೆ ತಂಡಗಳಿಂದ ಬೆಂಗಳೂರು ನಗರದ ವಿವಿಧ ಸ್ಥಳಗಳಲ್ಲಿ ಹಾಗು ತುಮಕೂರು ಜಿಲ್ಲೆಯ ಒಂದು ಕಡೆ **02 ಸರ್ಕಾರಿ ನೌಕರರು** ತಮ್ಮ ಬಲ್ಲ ಮೂಲಗಳಿಗಿಂತ ಅಸಮತೋಲನ ಆಸ್ತಿ-ಪಾಸ್ತಿಗಳನ್ನು ಹೊಂದಿರುವ ಬಗ್ಗೆ ವಿಶ್ವಾಸಾರ್ಹ ಮಾಹಿತಿ ಸಂಗ್ರಹಿಸಿ ಅಕ್ರಮ ಆಸ್ತಿ ಗಳಿಕೆ ಪ್ರಕರಣಗಳನ್ನು ದಾಖಲಿಸಿ ಅವರಿಗೆ ಸಂಬಂಧಿಸಿದ **08 ಸ್ಥಳಗಳ ಮೇಲೆ** ಇಂದು ದಾಳಿ ನಡೆಸಿರುತ್ತದೆ. ಶೋಧನಾ ಕಾರ್ಯವು ಮುಂದುವರೆದಿದ್ದು ಈವರೆಗೆ ಶೋಧನೆ ನಡಸಲಾದ ಸ್ಥಳಗಳಲ್ಲಿ **ತನಿಖೆಯಲ್ಲಿ ಈವರೆಗೆ ಪತ್ತೆಯಾದ** ಆರೋಪಿತ ಸರ್ಕಾರಿ ನೌಕರರ ಚರ ಮತ್ತು ಸ್ಥಿರ ಆಸ್ತಿಗಳ ವಿವರ ಈ ಕೆಳಕಂಡಂತಿರುತ್ತವೆ.

1. **ಶ್ರೀ.ಎನ್.ಜಿ ಗೌಡಯ್ಯ, ಇಂಜಿನಿಯರ್ ಆಫೀಸರ್-5, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಕೇಂದ್ರ ಕಛೇರಿ,ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು.**

ತಮ್ಮ ಮತ್ತು ಕುಟುಂಬಸ್ಥರ ಹೆಸರಿನಲ್ಲಿ 2 ಮನೆ, 8 ನಿವೇಶನಗಳು, 14 ಅಪಾರ್ಟ್‌ಮೆಂಟ್‌ಗಳು **ಚಿನ್ನ 18 ಕೆಜಿ 200 ಗ್ರಾಂ**, ಬೆಳ್ಳಿ 10 ಕೆಜಿ, 3 ಕಾರ್‌ಗಳು, 3 ದ್ವಿಚಕ್ರ ವಾಹನಗಳು, **₹ 77 ಲಕ್ಷ ನಗದು** ಹಾಗೂ ವಿವಿಧ **ಬ್ಯಾಂಕಗಳಲ್ಲಿ ₹ 15 ಲಕ್ಷ** ಹಾಗೂ ಠೇವಣಿಗಳು ₹ 30 ಲಕ್ಷ ಕಂಡು ಬಂದಿರುತ್ತದೆ.

**2. ಶ್ರೀ ಸ್ವಾಮಿ, ಟಿ.ಆರ್, ಮುಖ್ಯ ಅಭಿವೃದ್ಧಿ ಅಧಿಕಾರಿ, ಕೆ.ಐ.ಎ.ಡಿ.ಬಿ, ಮುಖ್ಯ ಕಛೇರಿ, ಖನಿಜ ಭವನ, ಬೆಂಗಳೂರು.**

ತಮ್ಮ ಕುಟುಂಬಸ್ಥರ ಮತ್ತು ಸಂಬಂಧಿಕರ ಹೆಸರಿನಲ್ಲಿ 8 ಮನೆ, **11 ನಿವೇಶನಗಳು, ವಿವಿಧೆಡೆ 14 ಎಕರೆ ಕೃಷಿ ಜಮೀನು,** ಚಿನ್ನ 1.6 ಕೆಜಿ, **ಬೆಳ್ಳಿ 7.5 ಕೆಜಿ,** 3 ಕಾರ್, ₹ 4 ಕೋಟಿ 52 ಲಕ್ಷ ನಗದು ಕಂಡು ಬಂದಿರುತ್ತದೆ.

ಮೇಲ್ಕಂಡ 2 ಪ್ರಕರಣಗಳಲ್ಲಿ ತನಿಖೆ ಮುಂದುವರೆದಿದ್ದು, ಸದರಿ ಸರ್ಕಾರಿ ನೌಕರರು ಹೊಂದಿರುವ ಆಸ್ತಿ-ಪಾಸ್ತಿಗಳ ಹಾಗೂ ವಶಪಡಿಸಿಕೊಳ್ಳಲಾದ ನಗದಿನ ಮೂಲದ ಬಗ್ಗೆ ತನಿಖೆ ಹಾಗೂ ದಾಖಲೆಗಳ ಪರಿಶೀಲನಾ ಕಾರ್ಯ ಹಾಗೂ ಸಂಬಂಧಪಟ್ಟ ಇನ್ನು ಹೆಚ್ಚಿನ ಸ್ಥಳಗಳ ಮಾಹಿತಿ ಸಂಗ್ರಹಣೆ ಮುಂದುವರೆದಿದೆ ಎಂದು ಪ್ರಕಟಣೆ ತಿಳಿಸಿದೆ.

**ಸಂಖ್ಯೆ:1104/1204**

## ಎಸಿಬಿ ದಾಳಿ

**ಬೆಂಗಳೂರು, ಅಕ್ಟೋಬರ್ 6, 2018 (ಕರ್ನಾಟಕ ವಾರ್ತೆ)**

ರಾಮನಗರ ಜಿಲ್ಲೆ, ಮಾಗಡಿ ತಾಲ್ಲೂಕು, ಸೋಲೂರು ಹೋಬಳಿ, ಗರ್ಗೇಶ್ವರಪುರ ಗ್ರಾಮದ ನಿವಾಸಿಯೊಬ್ಬರನ್ನು ಶ್ರೀ. ದಾಳೇಗೌಡ, ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಹಾಗೂ ಶ್ರೀ.ಮಂಜುನಾಥ್, ಪೊಲೀಸ್ ಕಾನ್‌ಸ್ಟೇಬಲ್, ಕುದೂರು ಪೊಲೀಸ್ ಠಾಣೆ ರವರುಗಳು ಕ್ಯಾಟ್‌ಫಿಶ್ ಸಾಕಾಣಿಕೆ ಮಾಡಿದ್ದ ಮೇರೆಗೆ ಠಾಣೆಯಲ್ಲಿರಿಸಿಕೊಂಡು, ಪ್ರಕರಣ ದಾಖಲಿಸುವುದಾಗಿ ಹೆದರಿಸಿ, ಪ್ರಕರಣ ದಾಖಲಿಸದೆ ಇರಲು ರೂ.70,000/– ಲಂಚದ ಹಣಕ್ಕೆ ಬೇಡಿಕೆ ಇಟ್ಟಿರುತ್ತಾರೆ.

ದಿನಾಂಕ:05/10/2018 ರಂದು ಶ್ರೀ.ದಾಳೇಗೌಡ, ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ರವರ ಪರವಾಗಿ ಶ್ರೀ.ಮಂಜುನಾಥ್, ಪೊಲೀಸ್ ಕಾನ್‌ಸ್ಟೇಬಲ್ ರವರು ರೂ.50,000/– ಲಂಚದ ಹಣವನ್ನು ಸ್ವೀಕರಿಸುತ್ತಿದ್ದ ಸಂದರ್ಭದಲ್ಲಿ ರಾಮನಗರ ಭ್ರಷ್ಟಾಚಾರ ನಿಗ್ರಹ ದಳದ ಅಧಿಕಾರಿಗಳಿಗೆ ಸಿಕ್ಕಿಬಿದ್ದಿರುತ್ತಾರೆ. ಲಂಚದ ಹಣವನ್ನು ವಶಪಡಿಸಿಕೊಳ್ಳಲಾಗಿದೆ. ಶ್ರೀ.ದಾಳೇಗೌಡ, ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ರವರು ತಲೆಮರೆಸಿಕೊಂಡಿದ್ದು, ತನಿಖೆ ಮುಂದುವರೆದಿದೆ ಎಂದು ಪ್ರಕಟಣೆ ತಿಳಿಸಿದೆ.

**ಸಂಖ್ಯೆ:1105/1205**

# ACB Raid

Bengaluru, October 6 (Karnataka Information)

**A resident of Gargeshwarapura Village, Solur Hobli, Magadi Taluk, Ramanagara District was detained for breeding of Cat Fish by Sri.DaleGowda, Police Sub Inspector and Sri.Manjunath, Police Constable, Kudur Police station. They had demanded a bribe amount of Rs.70,000/- for not registering of FIR.**

**On 05/10/2018 the officials of ACB Ramanagar PS trapped Sri.Manjunath, Police Constable while accepting Rs.50,000/- from the complainant on behalf of Sri.DaleGowda, Police Sub Inspector. Trap amount has been seized, Sri. Manjunath, Police Constable has been arrested, Sri.DaleGowda, Police Sub Inspector is absconding and investigation is continued says press release.**

**ಸಂಖ್ಯೆ:1106/1206**

## Celebration of World Breast Cancer Awareness programme

Bengaluru, October 6 (Karnataka Information)

As per the guidelines of WHO, Kidwai Cancer Institute is celebrating World Breast cancer Awareness programme in the entire month of October.

On account of this the Institute is conducting free Mammography to identify Breast Related Diseases in the Hospital, and conducting seminars and Guest Lectures in various Women colleges, NGO's and Women welfare organizations in and outside Bangalore. On 20th October 2018, Kidwai Cancer Institute is conducting one day CME on breast cancer. The main objective of this programme is to create awareness about this disease and to facilitate early detection.

**ಸಂಖ್ಯೆ:1107/1207**

## ಹಿಂದುಳಿದ ವರ್ಗಗಳ ನಿರುದ್ಯೋಗಿ ಪದವೀಧರರಿಗೆ ಸ್ವಯಂ ಉದ್ಯೋಗ ಸಾಲ ಸೌಲಭ್ಯ ರೂ. 10.00 ಲಕ್ಷಗಳು

**ಬೆಂಗಳೂರು, ಅಕ್ಟೋಬರ್ 6, 2018 (ಕರ್ನಾಟಕ ವಾರ್ತೆ)**

ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಿಂದ 2018-19 ನೇ ಹಿಂದುಳಿದ ವರ್ಗಗಳ ನಿರುದ್ಯೋಗಿ ಪದವೀಧರರಿಗೆ ಸ್ವಯಂ ಉದ್ಯೋಗ ಸಾಲ ಸೌಲಭ್ಯವನ್ನು ವಾರ್ಷಿಕ ಶೇ. 6 ರ ಬಡ್ಡಿದರದಲ್ಲಿ ಗರಿಷ್ಠ ರೂ. 10.00 ಲಕ್ಷಗಳ ವರೆಗೆ ಸಾಲ ಒದಗಿಸಲಾಗಿದೆ. ಈ ಯೋಜನೆಯಲ್ಲಿ ಸೌಲಭ್ಯ ಪಡೆಯಲು ಬಯಸುವವರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ನಿಗದಿತ ಅರ್ಜಿ ನಮೂನೆಗಳನ್ನು ನಿಗಮದ ಜಿಲ್ಲಾ ವ್ಯವಸ್ಥಾಪಕರ ಕಛೇರಿಯಲ್ಲಿ ಅಥವಾ ಆಯಾ ತಾಲ್ಲೂಕಿನ ಹಿಂದುಳಿದ ವರ್ಗಗಳ ಕಲ್ಯಾಣ ವಿಸ್ತರಣಾಧಿಕಾರಿಗಳ ಕಛೇರಿಯಲ್ಲಿ ಅರ್ಜಿ ಪಡೆದು ಭರ್ತಿ ಮಾಡಿದ ಅರ್ಜಿಗಳನ್ನು ಅಗತ್ಯ ದಾಖಲೆಗಳೊಂದಿಗೆ ಸಲ್ಲಿಸಲು ಕೊನೆಯ ದಿನಾಂಕ 20-10-2018. ಹೆಚ್ಚಿನ ವಿವರಗಳನ್ನು ನಿಗಮದ

www.karnataka.gov.in/dbcdc ವೆಬ್‌ಸೈಟ್‌ನ್ನು ಸಂಪರ್ಕಿಸಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

**ಸಂಖ್ಯೆ:1108/1208**

# ರಾಷ್ಟ್ರಮಟ್ಟದ ವಿದ್ಯಾರ್ಥಿ ವೇತನ

**ಬೆಂಗಳೂರು, ಅಕ್ಟೋಬರ್ 6, 2018 (ಕರ್ನಾಟಕ ವಾರ್ತೆ)**

ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಾಲಯ ನವದೆಹಲಿ ಇವರು ಕೇಂದ್ರ ಸರ್ಕಾರದ ವತಿಯಿಂದ ಕಾಲೇಜು ಮತ್ತು ವಿಶ್ವವಿದ್ಯಾಲಯಗಳ ವಿದ್ಯಾರ್ಥಿಗಳಿಗಾಗಿ ನೀಡುವ ರಾಷ್ಟ್ರಮಟ್ಟದ ವಿದ್ಯಾರ್ಥಿ ವೇತನಕ್ಕೆ 2014ನೇ ಸಾಲಿನಲ್ಲಿ ಆಯ್ಕೆಯಾಗಿರುವ ವಿದ್ಯಾರ್ಥಿಗಳಿಗೆ 4 ನೇ ನವೀಕರಣ ಪ್ರಕ್ರಿಯೆಯನ್ನು ಕೈಗೊಳ್ಳಲಾಗುತ್ತಿದೆ.

ಇದಕ್ಕಾಗಿ ಸಂಬಂಧಪಟ್ಟ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಜಿ ನಮೂನೆಗಳನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ಅಳವಡಿಸಲಾಗಿದೆ. http://pue.kar.nic.in>Scholarship>MHRD Scholarship > MHRD Scholarship 2014 -IV RENEWAL.

ವಿದ್ಯಾರ್ಥಿಗಳು ಈ ವೆಬ್‌ಸೈಟನ್ನು ಸಂಪರ್ಕಿಸಿ ತಮಗೆ ಸಂಬಂಧಪಟ್ಟ ಮಾಹಿತಿಯನ್ನು (ಕಡ್ಡಾಯವಾಗಿ ವಿದ್ಯಾರ್ಥಿ ಸಂಖ್ಯೆಯೊಂದಿಗೆ) ನಿಗಧಿತ ನಮೂನೆಯಲ್ಲಿ ದಿನಾಂಕ 25–10–2018 ರೊಳಗೆ ಪ್ರಾಂಶುಪಾಲರಿಗೆ ನೀಡಲು ತಿಳಿಸಿದೆ. ಅಥವಾ ನಿಯಮಾನುಸಾರ ಅರ್ಜಿಯನ್ನು ಎಲ್ಲಾ ಧೃಢೀಕರಣಗಳೊಂದಿಗೆ ದಿನಾಂಕ 30–10–2018 ರೊಳಗಾಗಿ ಕೆಳಕಂಡ ವಿಳಾಸಕ್ಕೆ ಖುದ್ದಾಗಿ ಅಥವಾ ಅಂಚೆ ಮೂಲಕ ಸಲ್ಲಿಸಬಹುದಾಗಿದೆ.

ಪ್ರಾಂಶುಪಾಲರುಗಳು ವಿದ್ಯಾರ್ಥಿಗಳಿಂದ ಬಂದ ಅರ್ಜಿಗಳನ್ನು ನಿಯಮಾನುಸಾರ ಪರಿಶೀಲಿಸಿ ನಿಗಧಿತ ನಮೂನೆಯಲ್ಲಿ ದಿನಾಂಕ 30–10–2018 ರ ಒಳಗೆ ಕೆಳಕಂಡ ವಿಳಾಸಕ್ಕೆ ಖುದ್ದಾಗಿ ಅಥವಾ ಅಂಚೆ ಮೂಲಕ ಸಲ್ಲಿಸಲು ತಿಳಿಸಿದೆ. ವಿದ್ಯಾರ್ಥಿಗಳು ಈ ಮೊದಲು 4 ನೇ ನವೀಕರಣ ನಿಮಿತ್ತ ಅರ್ಜಿಗಳನ್ನು ಸಲ್ಲಿಸಿದ್ದಲ್ಲಿ, ಅವುಗಳನ್ನು ಪರಿಗಣಿಸಲಾಗುವುದಿಲ್ಲ. ವಿದ್ಯಾರ್ಥಿಗಳು ಪುನ: ಅರ್ಜಿಯನ್ನು ನಿಗದಿತ ನಮೂನೆಯಲ್ಲಿ ಧೃಢೀಕರಣಗಳೊಂದಿಗೆ ಸಲ್ಲಿಸುವುದು ಹಾಗೂ ಅರ್ಜಿಯ ನಕಲು ಪ್ರತಿಗಳನ್ನು ಕಡ್ಡಾಯವಾಗಿ ತಮ್ಮ ಬಳಿಸಿ ಇರಿಸಿಕೊಳ್ಳುವುದು. 2014 ನೇ ಸಾಲಿನಲ್ಲಿ ಈ ವಿದ್ಯಾರ್ಥಿ

ವೇತನಕ್ಕೆ ಆಯ್ಕೆಗೊಂಡಿರುವ ವಿದ್ಯಾರ್ಥಿಗಳು ಯಾವುದೇ ಕಾರಣಕ್ಕೂ 4 ನೇ ನವೀಕರಣಕ್ಕೆ online ಮೂಲಕ ಅರ್ಜಿಯನ್ನು ಸಲ್ಲಿಸಬಾರದೆಂದು ಪ್ರಕಟಣೆ ತಿಳಿಸಿದೆ.

**ಸಂಖ್ಯೆ:1109/1209**

# ವಿದ್ಯಾರ್ಥಿ ವೇತನಕ್ಕೆ ಅರ್ಜಿ ಆಹ್ವಾನ

**ಬೆಂಗಳೂರು, ಅಕ್ಟೋಬರ್ 6, 2018 (ಕರ್ನಾಟಕ ವಾರ್ತೆ)**

ಮೆಟ್ರಿಕ್ ನಂತರದ ಕೋರ್ಸುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಅರ್ಹ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಹಾಗೂ ಅಲೆಮಾರಿ/ಅಲೆ ಅಲೆಮಾರಿ ವಿದ್ಯಾರ್ಥಿಗಳಿಂದ 2018–19 ನೇ ಸಾಲಿಗೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೂಲಕ ನೀಡಲಾಗುತ್ತಿರುವ "ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ" "ಶುಲ್ಕ ವಿನಾಯಿತಿ" "ವಿದ್ಯಾಸಿರಿ–ಊಟ ಮತ್ತು ವಸತಿ ಸಹಾಯ ಯೋಜನೆ" ಮತ್ತು ನರ್ಸಿಂಗ್ ವಿದ್ಯಾರ್ಥಿಗಳಿಗೆ "ಶಿಷ್ಯವೇತನ" ಸೌಲಭ್ಯಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ 31–10–2018. ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬೇಕಾದ ವೆಬ್‌ಸೈಟ್ www.karepass.cgg.gov.in ಹಾಗೂ www.backwardclasse.kar.nic.in ಕಾರ್ಯಕ್ರಮಗಳ ವಿವರ, ಅರ್ಹತೆ, ಸಲ್ಲಿಸಬೇಕಾದ ದಾಖಲೆಗಳು ಕುರಿತು ಹೆಚ್ಚಿನ ಮಾಹಿತಿಗಾಗಿ 805077005/805077004 ನ್ನು ಸಂಪರ್ಕಿಸಲು ಪ್ರಕಟಣೆ ತಿಳಿಸಿದೆ.

**ಸಂಖ್ಯೆ:1110/1210**

# ರಾಜ್ಯದಲ್ಲಿ ಗುಂಪು ಹಲ್ಲೆ/ಗುಂಪು ಹತ್ಯೆ ತಡೆಗಾಗಿ ರಾಜ್ಯ ಸರ್ಕಾರದಿಂದ ಕಠಿಣ ಕ್ರಮ

**ಬೆಂಗಳೂರು, ಅಕ್ಟೋಬರ್ 6, 2018 (ಕರ್ನಾಟಕ ವಾರ್ತೆ)**

ದೇಶದ ಕೆಲವು ಭಾಗಗಳಲ್ಲಿ ಇತ್ತೀಚೆಗೆ ಮಕ್ಕಳ ಕಳ್ಳರೆಂದು ಅಥವಾ ಗೋ ಹಂತಕರೆಂದು ಅನುಮಾನಗೊಂಡು ಅಂತಹವರ ಮೇಲೆ ಕೆಲವರಿಂದ ಕಾನೂನುಬಾಹಿರವಾಗಿ ಗುಂಪು ಹಲ್ಲೆ ನಡೆಸಿರುವುದು ಅಥವಾ ಗುಂಪು ಹತ್ಯೆ ಮಾಡಿರುವ ಪ್ರಕರಣಗಳು ಸಂಭವಿಸಿವೆ. ಈ ರೀತಿ ಅಮಾನುಷ ಅಥವಾ ಬರ್ಬರ ಹತ್ಯೆಯಿಂದ ಪ್ರಕರಣಗಳು ಕರ್ನಾಟಕ ರಾಜ್ಯದಲ್ಲಿ ಮರುಕಳಿಸದಂತೆ ರಾಜ್ಯ ಪೊಲೀಸ್ ಇಲಾಖೆ ಹಲವಾರು ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡಿದೆ.

ಪ್ರಧಾನವಾಗಿ ಪ್ರತಿ ಜಿಲ್ಲೆಯಲ್ಲಿ ಉನ್ನತ ಪೊಲೀಸ್ ಅಧಿಕಾರಿಗಳನ್ನು ನೋಡಲ್ ಅಧಿಕಾರಿಗಳನ್ನಾಗಿ ಮತ್ತು ಅವರಿಗೆ ನೆರವಾಗಲು ಮೇಲ್ದರ್ಜೆಯ ಪೊಲೀಸ್ ಅಧಿಕಾರಿಗಳನ್ನು ಸಹಾಯಕ ನೋಡೆಲ್ ಅಧಿಕಾರಿಗಳಾಗಿ ನೇಮಿಸಲಾಗಿದೆ.

ಮಹಾನಗರ ಪಾಲಿಕೆಗಳ ವ್ಯಾಪ್ತಿ ಬೆಂಗಳೂರು, ಮೈಸೂರು ಹುಬ್ಬಳ್ಳಿ–ಧಾರವಾಡ, ಬೆಳಗಾವಿ, ಮಂಗಳೂರು ಮತ್ತು ಕಲಬುರಗಿ ಪ್ರದೇಶಗಳಿಗೆ ಉಪ ಪೊಲೀಸ್ ಆಯುಕ್ತರು ಕಾನೂನು ಮತ್ತು ಶಿಸ್ತುಪಾಲನೆ ಇವರು ನೊಡೆಲ್ ಅಧಿಕಾರಿಗಳಾಗಿ ಸಹಾಯಕ ನೋಡೆಲ್ ಅಧಿಕಾರಿಯಾಗಿ ಸಂಬಂಧಪಟ್ಟ ವಿಭಾಗದ ಸಹಾಯಕ ಪೊಲೀಸ್ ಆಯುಕ್ತರು ಇನ್ನುಳಿದ 24 ಜಿಲ್ಲೆಗಳಲ್ಲಿ ನೊಡೆಲ್ ಅಧಿಕಾರಿಗಳಾಗಿ ಆಯಾ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹಾಗೂ ಸಹಾಯಕ ನೊಡೆಲ್ ಅಧಿಕಾರಿಗಳಾಗಿ ಸಂಬಂಧಪಟ್ಟ ಜಿಲ್ಲೆಯ ಕೇಂದ್ರಸ್ಥಾನದ ಉಪ ಪೊಲೀಸ್ ವರಿಷ್ಠಾಧಿಕಾರಿ ಅಥವಾ ಸಂಬಂಧಪಟ್ಟ ಜಿಲ್ಲೆಯ ಉಪ ವಿಭಾಗದ ಉಪ ಪೊಲೀಸ್ ವರಿಷ್ಠಾಧಿಕಾರಿಗಳನ್ನು ನೇಮಿಸಲಾಗಿದೆ.

ವಿಶೇಷ ಗಸ್ತುದಳ ರಚನೆ ಆ ಮೂಲಕ ದ್ವೇಷಭಾಷಣ, ಪ್ರಚೋದನಕಾರಿ ಹೇಳಿದ ಆಥವಾ ಸುಳ್ಳು ಸುದ್ದಿ ಹರಡುವವರ ಕುರಿತು ಗುಪ್ತ ವರದಿ ಸಂಗ್ರಹಿಸುವುದು ಮತ್ತು ನಿಗಾ ವಹಿಸುವುದು. ಗಲಭೆಗೀಡಾಗಬಹುದಾದ ಸೂಕ್ಷ್ಮ ಪ್ರದೇಶಗಳ ಗುರುತಿಸುವಿಕೆ, ಪ್ರತಿ ತಿಂಗಳು ನೋಡೆಲ್ ಅಧಿಕಾರಿಗಳಿಂದ ತಮ್ಮ ಪ್ರದೇಶ ವ್ಯಾಪ್ತಿಯ ಗುಪ್ತದಳದೊಂದಿಗೆ ಸಭೆ ಮತ್ತು ಸೂಕ್ತ ಕ್ರಮಕೈಗೊಳ್ಳಲು ಸೂಚಿಸಲಾಗಿದೆ.

ಪ್ರತಿ 3 ತಿಂಗಳಿಗೊಮ್ಮೆ ರಾಜ್ಯ ಮಟ್ಟದಲ್ಲಿ ನೋಡೆಲ್ ಅಧಿಕಾರಿಗಳು, ಗುಪ್ತದಳ ಹಾಗೂ ಕಾನೂನು ಮತ್ತು ಶಿಸ್ತುಪಾಲನೆ ವಿಭಾಗದ ಉನ್ನತ ಪೊಲೀಸ್ ಅಧಿಕಾರಿಗಳು, ಪೊಲೀಸ್ ಮಹಾ ನಿರ್ದೇಶಕರ ಸಭೆ ನಡೆಸಿ ಸೂಕ್ತಕ್ರಮ ಕೈಗೊಳ್ಳಲು ಸೂಚಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

**ಬೆಂಗಳೂರು ಜಲಮಂಡಲಿ: ಅಕ್ಟೋಬರ್ 09 ರಂದು ಸಕಾನಿಅ (ಪಶ್ಚಿಮ-2), ಸಕಾನಿಅ(ಆಗ್ನೇಯ-2) ಮತ್ತು ಸಕಾನಿಅ(ನೈರುತ್ಯ-2) ಉಪವಿಭಾಗಗಳಲ್ಲಿ ನೀರಿನ ಅದಾಲತ್.**

ಬೆಂಗಳೂರು ಜಲಮಂಡಲಿಯ ಸಕಾನಿಅ(ಪಶ್ಚಿಮ-2), ಸಕಾನಿಅ(ಆಗ್ನೇಯ-2) ಮತ್ತು ಸಕಾನಿಅ(ನೈರುತ್ಯ-2) ಉಪವಿಭಾಗಗಳಲ್ಲಿ ದಿನಾಂಕ: 09.10.2018 ರಂದು ನೀರಿನ ಬಿಲ್ಲು, ನೀರು ಮತ್ತು ಒಳಚರಂಡಿ ಸಂಪರ್ಕ ಕಲ್ಪಿಸುವಲ್ಲಿನ ವಿಳಂಬ, ಗೃಹ ಬಳಕೆಯಿಂದ ಗೃಹೇತರ ಬಳಕೆ ಪರಿವರ್ತನೆ ವಿಳಂಬ ಮತ್ತಿತರ ಕುಂದುಕೊರತೆಗಳಿಗೆ ಸಂಬಂಧಿಸಿದಂತೆ ನೀರಿನ ಅದಾಲತ್‌ಅನ್ನು ಬೆಳಗ್ಗೆ 9.30 ರಿಂದ 11:00 ಗಂಟೆಯವರೆಗೆ ನಡೆಸಲಾಗುತ್ತದೆ.

ದಿನಾಂಕ:09.10.2018 ರಂದು ಸಕಾನಿಅ(ಪಶ್ಚಿಮ-2) ಉಪವಿಭಾಗ ವ್ಯಾಪ್ತಿಯ ನಾಗರಭಾವಿ, ಅನ್ನಪೂರ್ಣೇಶ್ವರಿನಗರ, ಸರ್.ಎಂ.ವಿ ಲೇಔಟ್, ಮೂಡಲಪಾಳ್ಯ ಸೇವಾ ಠಾಣೆ ವ್ಯಾಪ್ತಿಯ ಕುಂದುಕೊರತೆಗಳಿಗೆ ಸಂಬಂಧಿಸಿದಂತೆ ಹೊರವರ್ತುಲ ರಸ್ತೆ, ನಾಗರಭಾವಿ ಇಲ್ಲಿನ ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು (ಪಶ್ಚಿಮ-2) ಕಚೇರಿಯಲ್ಲಿ ಸಮಸ್ಯೆಗಳನ್ನು ಪರಿಶೀಲಿಸಿ ಬಗೆಹರಿಸಲಾಗುತ್ತದೆ.

ಹೆಚ್ಚಿನ ಮಾಹಿತಿಗೆ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ: ಕಾರ್ಯನಿರ್ವಾಹಕ ಅಭಿಯಂತರರು (ವಾಯುವ್ಯ-1) 23491123, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ಪಶ್ಚಿಮ-2) ಉಪವಿಭಾಗ: 23212181.

ಸಕಾನಿಅ(ಆಗ್ನೇಯ-2) ಉಪವಿಭಾಗ ವ್ಯಾಪ್ತಿಯಲ್ಲಿನ ಜೀವನ್ ಭೀಮಾನಗರ, ಹೆಚ್.ಎ.ಎಲ್, 2ನೇ ಹಂತ, ಇಂದಿರಾನಗರ, ಬೈಯಪ್ಪನ ಹಳ್ಳಿ, ಸದಾನಂದನಗರ, ಸೇವಾ ಠಾಣೆ ವ್ಯಾಪ್ತಿಯ ಕುಂದು ಕೊರತೆಗಳಿಗೆ ಸಂಬಂಧಿಸಿದಂತೆ 10ನೇ ಮುಖ್ಯ ರಸ್ತೆ, 7ನೇ ಅಡ್ಡ ರಸ್ತೆ, ಇಂದಿರಾನಗರ ಕ್ಲಬ್ ಹಿಂಭಾಗ, ಹೆಚ್.ಎ.ಎಲ್ 2ನೇ ಹಂತ, ಇಲ್ಲಿನ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ಆಗ್ನೇಯ-2) ಕಚೇರಿಯಲ್ಲಿ ಸಮಸ್ಯೆಗಳನ್ನು ಪರಿಶೀಲಿಸಿ ಬಗೆಹರಿಸಲಾಗುತ್ತದೆ.

ಹೆಚ್ಚಿನ ಮಾಹಿತಿಗೆ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ:ಕಾರ್ಯನಿರ್ವಾಹಕ ಅಭಿಯಂತರರು (ಆಗ್ನೇಯ-1)22945169. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ಆಗ್ನೇಯ-2) ಉಪವಿಭಾಗ 22945163.

ಸಕಾನಿಅ(ನೈರುತ್ಯ-2) ಉಪವಿಭಾಗ ವ್ಯಾಪ್ತಿಯಲ್ಲಿನ ಕತ್ರಿಗುಪ್ಪೆ, ಹೊಸಕೆರೆಹಳ್ಳಿ, ದೇವಗಿರಿ-1, ಇಟ್ಟಮಡು ಸೇವಾ ಠಾಣೆ ವ್ಯಾಪ್ತಿಯ ಕುಂದು ಕೊರತೆಗಳಿಗೆ ಸಂಬಂಧಿಸಿದಂತೆ 1ನೇ ಮುಖ್ಯ ರಸ್ತೆ, ಬನಶಂಕರಿ 3ನೇ ಹಂತ ಇಲ್ಲಿನ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ನೈರುತ್ಯ-2) ಕಚೇರಿಯಲ್ಲಿ ಸಮಸ್ಯೆಗಳನ್ನು ಪರಿಶೀಲಿಸಿ ಬಗೆಹರಿಸಲಾಗುತ್ತದೆ.

ಹೆಚ್ಚಿನ ಮಾಹಿತಿಗೆ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ:ಕಾರ್ಯನಿರ್ವಾಹಕ ಅಭಿಯಂತರರು (ನೈರುತ್ಯ) 22945196 ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ನೈರುತ್ಯ-2) ಉಪವಿಭಾಗ 22945144.

ಕುಂದು ಕೊರತೆಗಳಿಗೆ ಸಂಬಂಧಿಸಿದಂತೆ ಮಂಡಲಿಯ 24/7 ದೂರುನಿರ್ವಹಣಾ ಕೇಂದ್ರದ ದೂರವಾಣಿ ಸಂಖ್ಯೆ: 22238888, ಸಹಾಯವಾಣಿ 1916 ಹಾಗೂ ವಾಟ್ಸ್ಆಪ್ ಸಂಖ್ಯೆ:8762228888 ಗೆ ಸಂಪರ್ಕಿಸಬಹುದಾಗಿದೆ.

## BWSSB: Water Adalath in AEE (West-2), AEE(South-East-2) and AEE(South-West-2) Sub Divisions on October 9th

BWSSB water Adalath is held on 09.10.2018 in AEE(West-2), AEE(Sout-East-2) and AEE(South-West-2) sub divisions from 9:30.am to 11.00 am to settle the grievances concerned with the water billing, delay in providing water supply & sanitary connections, delay in converting from domestic connection to non domestic connection & other related issues.

The disputes of consumers of Nagarabhavi, Annapoorneshwari nagar, S.M.V. Layout, Moodalapalya, service station coming under AEE (West-2) sub division, will be discussed in detail & problems will be settled in the office of the Assistant Executive Engineer (West -2) sub division, Outer ring road Nagarabhavi.

Details regarding the adalath can be obtained by the office of EE(North West-1):23491123 or office of AEE (West -2): 23212181.

The disputes of consumers of Jeevan Bheemanagar, HAL 2nd stage, Indiranagar Byappanahalli, Sadanandanagar service station coming under AEE (Sout-East-2) sub division, will be discussed in detail & problems will be settled in the office of the Assistant Executive Engineer (South-East-2) sub division, 10th Main road, 7th cross, Behind Indiranagar club, HAL 2nd Stage.

Details regarding the adalath can be obtained by the office of EE (South-East-1): 22945169 or office of AEE (Sout-East-2): 22945163.

The disputes of consumers of Katriguppe, Hoskerehalli, Devagiri-1, Ittamadu, service station coming under AEE (Sout-West-2) sub division, will be discussed in detail & problems will be settled in the office of the Assistant Executive Engineer(Sout-West-2) sub division, 1st Main road, Banashankari 3rd Stage.

Details regarding the adalath can be obtained by the office of EE(South-West) : 22945196 or office of AEE (Sout-West -2): 22945144.

For any problems regarding the water supply and all, publics contact 24x7 call centre :22238888 helpline number:1916 & whats app no: 8762228888.

## ಮೊಲ ಸಾಕಾಣಿಕೆ

**ಬೆಂಗಳೂರು, ಅಕ್ಟೋಬರ್ 6, 2018 (ಕರ್ನಾಟಕ ವಾರ್ತೆ)**

ರಾಜ್ಯ ಜಾನುವಾರು ಸಂವರ್ಧನಾ ಮತ್ತು ತರಬೇತಿ ಕೇಂದ್ರ, ಹೆಸರಘಟ್ಟ, ಬೆಂಗಳೂರು–88 ಇಲ್ಲಿ ದಿನಾಂಕ 10–10–2018 ರಿಂದ 12–10–2018 ರವರೆಗೆ ಮೊಲ ಸಾಕಾಣಿಕೆ ಕುರಿತು ಆಸಕ್ತಿಯುಳ್ಳ ರೈತರಿಗೆ, ರೈತ ಮಹಿಳೆಯರಿಗೆ ಮತ್ತು ನಿರುದ್ಯೋಗಿ ಯುವಕ/ಯುವತಿಯರಿಗೆ 3 ದಿನಗಳ ಮೊಲ ಸಾಕಾಣಿಕೆ ತರಬೇತಿ ಕಾರ್ಯಕ್ರಮವನ್ನು ಏರ್ಪಡಿಸಿದೆ.

ತರಬೇತಿ ಪಡೆಯಲಿಚ್ಛಿಸುವವರು ಆನ್‌ಲೈನ್‌ನಲ್ಲಿ ahvstrg.22web.org ನೋಂದಣಿ ಮಾಡಿಕೊಳ್ಳುವುದು. ತರಬೇತಿಗೆ ನೋಂದಣಿ ಮಾಡಿಸಿದವರು ಆಧಾರ್ ಕಾರ್ಡ್‌ನ ಒಂದು ಪ್ರತಿ ಮತ್ತು ಇತ್ತೀಚಿನ 2 ಪಾಸ್‌ಪೋರ್ಟ್ ಅಳತೆಯ ಭಾವಚಿತ್ರಗಳೊಂದಿಗೆ 10–10–2018 ರಂದು ಬೆಳಿಗ್ಗೆ 9–30 ಗಂಟೆಗೆ ತರಬೇತಿಗೆ ಹಾಜರಾಗಲು ಪ್ರಕಟಣೆ ತಿಳಿಸಿದೆ. ಹೆಚ್ಚಿನ ಮಾಹಿತಿಗೆ 080–28466456/ 080–28466397 ನ್ನು ಸಂಪರ್ಕಿಸಬಹುದು.

## ಸಾಲ ಮನ್ನಾ ಅವಧಿ ವಿಸ್ತರಣೆ

ಬೆಂಗಳೂರು, ಅಕ್ಟೋಬರ್ 6, (ಕರ್ನಾಟಕ ವಾರ್ತೆ)

"ಬೆಳೆ ಸಾಲ ಮನ್ನಾ ಯೋಜನೆ –2018" ರಡಿಯಲ್ಲಿ ರೈತರಿಂದ ಸ್ವಯಂ ದೃಢೀಕರಣ ಪತ್ರ ಪಡೆಯಲು ಅವಧಿ/ಗಡುವನ್ನು ಅಕ್ಟೋಬರ್ 31 ರವರೆಗೆ ವಿಸ್ತರಿಸಲಾಗಿದ್ದು ಎಂದು ಸಹಕಾರ ಸಚಿವರ ಕಾರ್ಯಾಲಯದ ಪ್ರಕಟಣೆ ತಿಳಿಸಿದೆ.

ರೈತರ ಅನುಕೂಲಕ್ಕೆ ತಕ್ಕಂತೆ ಕಾಲಾವಕಾಶವನ್ನು ವಿಸ್ತರಣೆ ಮಾಡಲಾಗುವುದು ಮತ್ತು ರೈತರಿಗೆ ಕೂಡಲೇ ದಾಖಲೆ ನೀಡಿ ಎಂದು ಸಹಕಾರ ಸಂಘಗಳು/ಸಹಕಾರಿ ಬ್ಯಾಂಕುಗಳ ಒತ್ತಾಯಿಸಬಾರದು ಎಂದು ಸಹಕಾರ ಸಂಘಗಳ ನಿಬಂಧಕರು ದಿನಾಂಕ: 06–10–2018 ರಂದು ಸುತ್ತೋಲೆಯನ್ನು ಹೊರಡಿಸಲಾಗಿರುತ್ತದೆ.

ರಾಜ್ಯದ ರೈತರು ಸಹಕಾರ ಸಂಘ/ಸಹಕಾರ ಬ್ಯಾಂಕುಗಳಿಂದ ಅಲ್ಪಾವಧಿ ಸಾಲ ಪಡೆದು, 10–07–2018 ಕ್ಕೆ ಹೊಂದಿರುವ ಹೊರ ಬಾಕಿಯಲ್ಲಿ ಗರಿಷ್ಠ ರೂ 1 ಲಕ್ಷ ವರೆಗಿನ ಸಾಲದ ಮೊತ್ತವನ್ನು, ಸಾಲ ಮನ್ನಾ ಯೋಜನೆಯಲ್ಲಿ ಫಲಾನುಭವಿ ರೈತರನ್ನು ಗುರುತಿಸಲು ದಿನಾಂಕ: 10–07–2018 ಕ್ಕೆ ಹೊರಬಾಕಿ ಹೊಂದಿರುವ ಎಲ್ಲಾ ಸಾಲದ ಖಾತೆಗಳಿಗೆ ಸಂಬಂಧಿಸಿದಂತೆ ಪ್ರತಿ ಕುಟುಂಬ ಮುಖ್ಯಸ್ಥನಿಂದ ಕಡ್ಡಾಯವಾಗಿ ಸಾಲ ಮನ್ನಾ ಅರ್ಜಿ/ಸ್ವಯಂ ದೃಢೀಕರಣ (ಮುದ್ರೆಯಿಲ್ಲದ ಅಫಿಡೆವಿಟ್) ಪತ್ರವನ್ನು ಪಡೆಯಲು ಈ ಹಿಂದೆ ನಮೂನೆಯನ್ನು ನೀಡಲಾಗಿತ್ತು.

ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿರವರ ಸೂಚನೆ ಮೇರೆಗೆ ಅರ್ಜಿ ಸಲ್ಲಿಕೆಯನ್ನು ಮತ್ತಷ್ಟು ಸರಳಗೊಳಿಸಿ, ಸಲ್ಲಿಕೆ ದಿನಾಂಕವನ್ನು ಅಕ್ಟೋಬರ್ 31 ರವರೆಗೆ ವಿಸ್ತರಿಸಲಾಗಿದೆ.

"ಬೆಳೆ ಸಾಲ ಮನ್ನಾ ಯೋಜನೆ –2018" ರಡಿಯಲ್ಲಿ ಈಗಾಗಲೇ ರೈತ ಕುಟುಂಬದ ಮುಖ್ಯಸ್ಥರು ಸಾಲ ಮನ್ನಾ/ಸ್ವಯಂ ದೃಢೀಕರಣ ಅರ್ಜಿಯನ್ನು ಸಹಕಾರ ಸಂಘಕ್ಕೆ/ಸಹಕಾರಿ ಬ್ಯಾಂಕಿಗೆ ಸಲ್ಲಿಸಿದ್ದರೆ, ಅಂತಹ ರೈತರನ್ನು ಹೊರತುಪಡಿಸಿ ಇನ್ನು ಮುಂದೆ ರೈತರಿಂದ ಸ್ವಯಂ ದೃಢೀಕರಣ ಪತ್ರ ಪಡೆಯಲು ಸೂಚಿಸಲಾಗಿದೆ. ದಿನಾಂಕ: 10–07–2018 ಕ್ಕೆ ಬೆಳೆ ಸಾಲ ಹೊರ ಬಾಕಿ ಹೊಂದಿರುವ ರೈತರಿಂದ (ಕುಟುಂಬದಲ್ಲಿ ಬೆಳೆ ಸಾಲ ಪಡೆದಿರುವ ಎಲ್ಲಾ ರೈತರಿಂದ) ಪ್ರಮಾಣ ಪತ್ರ ಹಾಗೂ ಆಧಾರ್ ಸಮ್ಮತಿ ಪತ್ರದಲ್ಲಿ ಸ್ವಯಂ ದೃಢೀಕರಣ ಪಡೆಯಲು ಸೂಚಿಸಲಾಗಿದೆ.

## ಪಂಡಿತ್ ರಾಜೀವ್ ತಾರನಾಥ್ ಅವರಿಗೆ
## "ರಾಜ್ಯ ಸಂಗೀತ ವಿದ್ವಾನ್ ಗೌರವ ಪ್ರಶಸ್ತಿ"

ಬೆಂಗಳೂರು, ಅಕ್ಟೋಬರ್ 6, (ಕರ್ನಾಟಕ ವಾರ್ತೆ)

ಕನ್ನಡ ಮತ್ತು ಸಂಸ್ಕೃತಿ ಇಲಾಖಾವತಿಯಿಂದ ನೀಡುವ 2018 ನೇ ಸಾಲಿನ "ರಾಜ್ಯ ಸಂಗೀತ ವಿದ್ವಾನ್ ಗೌರವ ಪ್ರಶಸ್ತಿ" ಗೆ ಬೆಂಗಳೂರಿನ ಪಂಡಿತ್ ರಾಜೀವ್ ತಾರನಾಥ್ ಅವರು ಭಾಜನರಾಗಿದ್ದಾರೆ.

ಸದರಿ ಪ್ರಶಸ್ತಿಗೆ ಅರ್ಹರನ್ನು ಆಯ್ಕೆಮಾಡಲು ಎಮ್. ವೆಂಕಟೇಶಕುಮಾರ, ಧಾರವಾಡ ಇವರ ಅಧ್ಯಕ್ಷತೆಯಲ್ಲಿ ಆಯ್ಕೆ ಸಮಿತಿಯನ್ನು ರಚಿಸಲಾಗಿತ್ತು.

## ಎಸಿಬಿ ದಾಳಿ

**ಬೆಂಗಳೂರು, ಅಕ್ಟೋಬರ್ 6, 2018 (ಕರ್ನಾಟಕ ವಾರ್ತೆ)**

ಕೋಲಾರ ಜಿಲ್ಲೆ, ಬಂಗಾರಪೇಟೆ ಟೌನ್, ರಹೀಂನಗರದ ನಿವಾಸಿಯೊಬ್ಬರು ಅವರ ತಂದೆಯ ಹೆಸರಿನಲ್ಲಿದ್ದ ಮನೆಯ ಕಂದಾಯವನ್ನು ಕಟ್ಟಲು ಬಂಗಾರಪೇಟೆ ನಗರಸಭೆ ಕಛೇರಿಯಲ್ಲಿ ವಿಚಾರಿಸಿದಾಗ ಕಂದಾಯ 2002 ನೇ ಸಾಲಿನಿಂದ ಬಾಕಿ ಇರುವುದಾಗಿ, ಬಾಕಿ ಇದ್ದ ಕಂದಾಯದ ಹಣವನ್ನು ಕಡಿಮೆ ಮಾಡಿಕೊಳ್ಳಲು ಶ್ರೀ. ನಾಗರಾಜ್, ಬಿಲ್ ಕಲೆಕ್ಟರ್, ಬಂಗಾರಪೇಟೆ ನಗರಸಭೆ ರವರು ರೂ.10,000/- ಲಂಚದ ಹಣಕ್ಕೆ ಬೇಡಿಕೆ ಇಟ್ಟಿರುತ್ತಾರೆ.

ದಿನಾಂಕ:06/10/2018 ರಂದು ಶ್ರೀ. ನಾಗರಾಜ್, ಬಿಲ್ ಕಲೆಕ್ಟರ್, ಬಂಗಾರಪೇಟೆ ನಗರಸಭೆ ರವರು ರೂ.9,000/- ಲಂಚದ ಹಣವನ್ನು ಫಿರ್ಯಾದುದಾರರಿಂದ ಸ್ವೀಕರಿಸುತ್ತಿರುವ ಸಂದರ್ಭದಲ್ಲಿ ಕೋಲಾರ ಭ್ರಷ್ಟಾಚಾರ ನಿಗ್ರಹ ದಳದ ಅಧಿಕಾರಿಗಳಿಗೆ ಸಿಕ್ಕಿಬಿದ್ದಿರುತ್ತಾರೆ. ಆರೋಪಿತರನ್ನು ಹಾಗೂ ಲಂಚದ ಹಣವನ್ನು ವಶಕ್ಕೆ ಪಡೆದುಕೊಂಡಿದ್ದು, ತನಿಖೆ ಮುಂದುವರೆದಿದೆ ಎಂದು ಪ್ರಕಟಣೆ ತಿಳಿಸಿದೆ.

## ACB Raid

Bengaluru, October 6 (Karnataka Information)

**A resident of Raheem Nagar, Bangarpet Town, Kolar District approched Bangarpet City Muncipality office to pay pending House Tax from the year 2002. Sri. Nagaraj, Bill collector, Bangarpet City Muncipality office had demanded a Bribe amount of Rs.10,000/- to reduce payable Tax amount.**

**On 06/10/2018 the officials of ACB Kolar PS trapped and Arrested Sri.Nagaraj, Bill collector while accepting Rs.9,000/- from the complainant. The bribe amount has been seized. The Case is under Investigation says official press release.**